# ಎಸ್.ಜೆ.ಎಂ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ
# ಮಾನವ ಹಕ್ಕುಗಳ ಕಲ್ಯಾಣ ಮಂಡಳಿ (ರಿ.), ಚಿತ್ರದುರ್ಗ

ಇವರುಗಳ ಸಂಯುಕ್ತಾಶ್ರಯದಲ್ಲಿ

## "ಮಾನವ ಹಕ್ಕುಗಳ ಅರಿವು, ಹಕ್ಕುಗಳ ಉಲ್ಲಂಘನೆಗೆ ಪರಿಹಾರ ಮತ್ತು ಮಾನವ ಹಕ್ಕುಗಳ ಆಯೋಗದ ಚಟುವಟಿಕೆಗಳು"

**ದಿನಾಂಕ : 08-08-2015ನೇ ಶನಿವಾರ ಸಮಯ : ಬೆಳಿಗ್ಗೆ 10.30ಕ್ಕೆ**

**ಸ್ಥಳ : ಎಸ್.ಜೆ.ಎಂ. ಮಹಿಳಾ ಕಾಲೇಜಿನ ಸಭಾಂಗಣ, ಚಿತ್ರದುರ್ಗ**

ಉದ್ಘಾಟನೆ : **ಡಾ. ಲೋಹಿತಾಶ್ವ ಡಿ. ನಾಯ್ಕರ್**
ಪ್ರಖ್ಯಾತ ಮಾನವ ಹಕ್ಕುಗಳ ತಜ್ಞರು ಹಾಗೂ ಪ್ರೇರಕರು
ಮತ್ತು ಸಂದರ್ಶಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕಾನೂನು ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಅಧ್ಯಕ್ಷತೆ : **ಪ್ರೊ. ಎಂ.ಎಸ್. ಕರಿಸಿದ್ದೇಶ್ವರ ಸ್ವಾಮಿ**
ಪ್ರಾಚಾರ್ಯರು, ಎಸ್.ಜೆ.ಎಂ. ಮಹಿಳಾ ಪ್ರಥಮ ದರ್ಜೆ ಕಾಲೇಜು,
ಚಿತ್ರದುರ್ಗ

ಮುಖ್ಯ ಅತಿಥಿಗಳು : **ಡಾ. ನಟರಾಜ್**, ಸಹಪ್ರಾಧ್ಯಾಪಕರು,
ಮುಖ್ಯಸ್ಥರು, ಅಪರಾಧ ಶಾಸ್ತ್ರ ಹಾಗೂ ನ್ಯಾಯ ವಿಜ್ಞಾನ ವಿಭಾಗ
ಸರ್ಕಾರಿ ಕಲಾ ಕಾಲೇಜು, (ಸ್ವಯತ್ತ)ಚಿತ್ರದುರ್ಗ

**ಶ್ರೀ ಜಿ.ಎಸ್. ವೆಂಕಟರೆಡ್ಡಿ**
ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ
ಅಧ್ಯಕ್ಷರು, ಮಾನವ ಹಕ್ಕುಗಳ ಕಲ್ಯಾಣ ಮಂಡಳಿ (ರಿ.) ಹಾಗೂ
ಪ್ರಾಚಾರ್ಯರು, ಎಸ್.ಎಸ್.ಕೆ.ಎಸ್. ಪದವಿ ಪೂರ್ವ ಕಾಲೇಜು,
ಚಿತ್ರದುರ್ಗ



ಸರ್ವರಿಗೂ ಆದರದ
ಸುಸ್ವಾಗತ



ಪ್ರಾಚಾರ್ಯರು, ಬೋಧಕ,
ಬೋಧಕೇತರರು ಹಾಗೂ ವಿದ್ಯಾರ್ಥಿನಿಯರು
ಎಸ್.ಜೆ.ಎಂ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ

9986941201
DTP & OFFSET PRINTERS, CTA

Chitradurga

Scanned with CamScanner

S J M ARTS COLLEGE FOR WOMEN, CHITRADURGA

Human Rights Welfare Council

JointlyOrganized

"Activities of the Human Rights Commission for the Redress of Human Awareness Rights"

Date: 08.08.2015

Time: 10.30 AM

Place: SJM Women's Rajatha Sabhangana

| | | |
|---|---|---|
| Inauguration | : | Dr. Lohiteshwar D. Naikar<br>Specialist for Human Rights<br>Visiting Professor, P.G. Centre for Law Dept.<br>Karnataka University, Dharwad |
| Presidential remarks | : | Prof. M.S. Karisiddeshwara swamy<br>Principal, SJM Arts College for Women,<br>Chitradurga |
| Chief guests | : | Dr. Nataraj<br>Associate Professor<br>Dept. of Criminology, Govt. Arts College<br>Chitradurga<br><br>Sri. G.S. Venkatareddy<br>Academic Council Member<br>Davangere University, Davangere |

PRINCIPAL
S.J.M. Arts College for women
CHITRADURGA - 577 501
Karnataka.

Scanned with CamScanner




SJM Arts College for Women, Chitradurga, Human Rights Welfare Council jointly organised one dayworkshop on Activities of the Human RightsCommission for the redress of Human Awareness on 08-08-2015 Dr Lohitashwa D Naikar inaugural this programme. Prof. KarisiddeshwaraswamyDr Nataraj,G S Venkatesh are in this programme.

15-16

8-8-2015

ಎಸ್. ಚಂದ್ರಶೇಖರ್ ಪಪಂ ಮುಖ್ಯಾಧಿಕಾರಿ

10-8-2015

■ ಕಾರ್ಯಾಗಾರದಲ್ಲಿ ಪ್ರಾಧ್ಯಾಪಕ ಲೋಹಿತಾಶ್ವ ಹೇಳಿಕೆ

# ಮಾನವ ಹಕ್ಕುಗಳ ವ್ಯಾಪ್ತಿ ದೊಡ್ಡದು

**ಚಿತ್ರದುರ್ಗ:** ಮಾನವ ಹಕ್ಕುಗಳ ಸಂರಕ್ಷಣೆ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಆದರೆ, ಬೆಳಕಿಗೆ ಬಂದಿರಲಿಲ್ಲ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಮಾನವ ಹಕ್ಕು ರಕ್ಷಣೆಯ ತ್ರಿಮೂರ್ತಿಗಳು ಎಂದು ಧಾರವಾಡ ವಿವಿ ಪ್ರಾಧ್ಯಾಪಕ ಡಾ. ಲೋಹಿತಾಶ್ವ ಡಿ. ನಾಯ್ಕರ್ ಹೇಳಿದರು.

ಇಲ್ಲಿನ ಎಸ್‌ಜೆಎಂ ಮಹಿಳಾ ಕಾಲೇಜಿನಲ್ಲಿ ಮಾನವ ಹಕ್ಕುಗಳ ಕಲ್ಯಾಣ ಮಂಡಳಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಾನವ ಹಕ್ಕುಗಳ ಅರಿವು ಹಾಗೂ ಉಲ್ಲಂಘನೆಗೆ ಪರಿಹಾರ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸರ್ಕಾರ ಪ್ರತ್ಯೇಕ ಸಚಿವಾಲಯ ಸ್ಥಾಪಿಸಿ, ಮಾನವನ ಹಕ್ಕುಗಳು ಉಲ್ಲಂಘನೆಯಾಗದಂತೆ ಕಾಯುತ್ತಿದೆ. ಒಂದು ವೇಳೆ ಉಲ್ಲಂಘನೆಯಾದರೆ ಪರಿಹಾರ ನೀಡಲಾಗುತ್ತಿದೆ. ಮನುಷ್ಯ ಹುಟ್ಟುತ್ತಲೆ ಹಕ್ಕುಗಳು ಬರುತ್ತವೆ. ಯಾರೂ ಕೂಡಾ ಇದನ್ನು ಕೊಡಬೇಕಾಗಿಲ್ಲ ಎಂದರು.

ಇದರ ವ್ಯಾಪ್ತಿ ದೊಡ್ಡದು. ಆಳವಾಗಿ ಅಧ್ಯಯನ ಮಾಡಬಹುದಾದ ಹಲವು ವಿಚಾರಗಳನ್ನು ಹೊಂದಿದೆ, ಅಧಿನಿಯಮ, ಒಪ್ಪಂದದ ಹಕ್ಕು, ನೈತಿಕವಾದ, ವ್ಯಕ್ತಿ, ಗುಂಪು, ಜಿಲ್ಲೆ, ರಾಜ್ಯ, ದೇಶಗಳಿಗೆ ವಿಭಿನ್ನವಾದ ಹಕ್ಕುಗಳನ್ನು ನೀಡಲಾಗಿದೆ. ಕೇವಲ ಮಾನವನ ಹಿತರಕ್ಷಣೆಗಾಗಿ ಈ ಹಕ್ಕುಗಳಿರದೆ, ಮರ, ಕಟ್ಟಡ, ಪ್ರಾಣಿ, ಪಕ್ಷಿ ಎಲ್ಲವಕ್ಕೂ ಇದೆ ಎಂದು ವಿವರಿಸಿದರು.

ಎಸ್‌ಜೆಎಂ ಮಹಿಳಾ ಕಾಲೇಜು ಪ್ರಾಚಾರ್ಯ ಎಂ.ಎಸ್. ಕರಿಸಿದ್ದೇಶ್ವರ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಕಲಾ ಕಾಲೇಜು ಅಪರಾಧ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ನಟರಾಜ್ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ರೇಖಾ ಪ್ರಾರ್ಥಿಸಿದರು. ಪ್ರಿಯಾಂಕಾ ಸ್ವಾಗತಿಸಿದರು. ಬೇಬಿ ವಂದಿಸಿದರು. ಮೇಘನಾ ನಿರೂಪಿಸಿದರು.

PRINCIPAL
S.J.M. Arts College for women
CHITRADURGA - 577 501
Karnataka.

Scanned with CamScanner

Dharwad University Professor Dr Lohitashwa said that the protection of human rights has existed since ancient times but did not come to light.

Speaking at the inauguration of the workshop on Human Rights Flow and Violation of Human Rights held under the auspices of the Human Rights Council

The government has set up a separate ministry and is waiting for human rights violations to be granted.

# ‘ಎಲ್ಲರಿಗಿದೆ ಸ್ವತಂತ್ರವಾಗಿ ಜೀವಿಸುವ ಹಕ್ಕು’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಮಾನವ ಜೀವಿಸಲು ಮತ್ತು ಅಭಿವೃದ್ಧಿ ಹೊಂದಲು ಅಗತ್ಯವಾದ ಕನಿಷ್ಠ ಹಕ್ಕುಗಳೇ ಮಾನವ ಹಕ್ಕುಗಳು’ ಎಂದು ಮಾನವ ಹಕ್ಕುಗಳ ತಜ್ಞ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕಾನೂನು ವಿಭಾಗದ ಸಂದರ್ಶಕ ಪ್ರಾಧ್ಯಾಪಕ ಡಾ.ಲೋಹಿತಾಶ್ವ ಡಿ.ನಾಯ್ಕರ್ ತಿಳಿಸಿದರು.

ನಗರದ ಎಸ್‌ಜೆಎಂ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಮಾನವ ಹಕ್ಕುಗಳ ಕಲ್ಯಾಣ ಮಂಡಳಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಾನವ ಹಕ್ಕುಗಳ ಅರಿವು, ಹಕ್ಕುಗಳ ಉಲ್ಲಂಘನೆಗೆ ಪರಿಹಾರ ಮತ್ತು ಆಯೋಗದ ಚಟುವಟಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಎಲ್ಲರೂ ಸ್ವತಂತ್ರವಾಗಿ ಜೀವಿಸುವ ಹಕ್ಕು ಹೊಂದಿದ್ದಾರೆ. ಪ್ರಕೃತಿದತ್ತವಾದ ಗಾಳಿ, ನೀರು, ಬೆಳಕು ಹಾಗೂ ಜೀವಿಸಲು ಅಗತ್ಯವಾಗಿ ಬೇಕಿರುವ ಆಹಾರ ಸೇವನೆ ಎಲ್ಲರ ಜನ್ಮಸಿದ್ಧ ಹಕ್ಕು. ಅದಕ್ಕೆ ಯಾವ ಕಾನೂನು ವ್ಯವಸ್ಥೆಯೂ ಬೇಕಿಲ್ಲ’ ಎಂದು ಹೇಳಿದರು.

‘ಮಾನವ ಹಕ್ಕುಗಳ ವಿಸ್ತಾರ ಅತ್ಯಂತ ದೊಡ್ಡದಾಗಿದ್ದು, ಅನೇಕ ತೆರನಾದ ಹಕ್ಕುಗಳಿವೆ. ಶಾರೀರಿಕ ಹಕ್ಕು, ಸಾಮಾಜಿಕ ಹಕ್ಕು, ವೈಯಕ್ತಿಕ ಹಕ್ಕು ಎಂದು ವಿಂಗಡಿಸಲಾಗಿದೆ. ಸಂವಿಧಾನ ಮೂಲ ಹಕ್ಕುಗಳನ್ನು ಕೇವಲ ಮನುಷ್ಯರಿಗಷ್ಟೇ ನೀಡಿಲ್ಲ. ಪಶು, ಪಕ್ಷಿ, ಪ್ರಾಣಿ ಮತ್ತು ಗಿಡ ಮರಗಳಿಗೂ ನೀಡಿದೆ’ ಎಂದರು.

ಐತಿಹಾಸಿಕ, ಪುರಾತನ ಕಟ್ಟಡ, ಶಿಲ್ಪಕಲೆಗಳನ್ನು ಧ್ವಂಸಗೊಳಿಸುವ ಹಕ್ಕು ಯಾರಿಗೂ ಇಲ್ಲ. ಹಾಗಾಗಿ ಅವುಗಳಿಗೂ ತನ್ನದೆ, ಆದ ಹಕ್ಕು ಇದೆ ಎಂಬುದನ್ನು ಮೊದಲು ಎಲ್ಲರೂ ತಿಳಿದುಕೊಳ್ಳಬೇಕು. ರಾಷ್ಟ್ರ ರಾಷ್ಟ್ರಗಳ ಮಧ್ಯೆ ನಡೆಯುವ ಘರ್ಷಣೆಗಳನ್ನು ತಡೆಯುವುದಕ್ಕಾಗಿ ಸಂಯುಕ್ತ ರಾಷ್ಟ್ರಗಳ ಒಕ್ಕೂಟ 1948ರಲ್ಲಿ ಮಾನವ ಹಕ್ಕುಗಳನ್ನು ಜಾರಿಗೆ ತಂದಿತು. ಪುರಾತನ ಕಾಲದಿಂದಲೂ ಮಾನವ ಹಕ್ಕುಗಳ ಪರಿಕಲ್ಪನೆ ಇದೆ. ಎರಡನೇ ಮಹಾಯುದ್ಧದ ನಂತರ ಮಾನವ ಹಕ್ಕುಗಳ ಮಹತ್ವ ಏನು ಎಂಬುದು ತಿಳಿಯಿತು’ ಎಂದು ವಿವರಿಸಿದರು.

ಎಸ್‌ಜೆಎಂ ಮಹಿಳಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಎಸ್. ಕರಿಸಿದ್ದೇಶ್ವರ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಕಲಾ ಕಾಲೇಜು ಅಪರಾಧಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ನಟರಾಜ್, ದಾವಣಗೆರೆ ವಿಶ್ವವಿದ್ಯಾಲಯ ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಜಿ.ಎಸ್.ವೆಂಕಟರೆಡ್ಡಿ ಸೇರಿದಂತೆ ಇತರರು ಇದ್ದರು.



ಚಿತ್ರದುರ್ಗದಲ್ಲಿ ಶನಿವಾರ ನಡೆದ ಮಾನವ ಹಕ್ಕುಗಳ ಅರಿವು, ಉಲ್ಲಂಘನೆಗೆ ಪರಿಹಾರ ಕಾರ್ಯಕ್ರಮವನ್ನು ಡಾ.ಲೋಹಿತಾಶ್ವ ಡಿ.ನಾಯ್ಕರ್ ಉದ್ಘಾಟಿಸಿದರು. ಪ್ರೊ.ಎಂ.ಎಸ್.ಕರಿಸಿದ್ದೇಶ್ವರಸ್ವಾಮಿ, ಡಾ.ನಟರಾಜ್, ಜಿ.ಎಸ್.ವೆಂಕಟರೆಡ್ಡಿ ಇದ್ದರು.

**Prajavani Kannada Daily News Paper 08-08-2016**

# ಮಾನವ ಹಕ್ಕು ಉಲ್ಲಂಘನೆಯಾದರೆ ಶಿಕ್ಷೆ

**ಚಿತ್ರದುರ್ಗ**

ಹಕ್ಕು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಕ್ಕು ಉಲ್ಲಂಘನೆಯಾದರೆ ಪರಿಹಾರ ಪಡೆದು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆಗೆ ಅವಕಾಶ ಇದೆ. ಆದುದರಿಂದ ಹಕ್ಕುಗಳ ಜೊತೆಗೆ ಕರ್ತವ್ಯ ಪರಿಪಾಲನೆ ಮಾಡಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕಾನೂನು ವಿಭಾಗದ ಸಂದರ್ಶಕ ಪ್ರಾಧ್ಯಾಪಕ ಡಾ.ಲೋಹಿತಾಶ್ವ ಡಿ.ನಾಯ್ಕರ್ ಹೇಳಿದರು.

ನಗರದ ಎಸ್.ಜೆ.ಎಂ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಎಸ್.ಜೆ.ಎಂ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಮಾನವ ಹಕ್ಕುಗಳ ಕಲ್ಯಾಣ ಮಂಡಳಿ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಮಾನವ ಹಕ್ಕುಗಳ ಅರಿವು, ಹಕ್ಕುಗಳ ಉಲ್ಲಂಘನೆಗೆ ಪರಿಹಾರ ಮತ್ತು ಮಾನವ ಹಕ್ಕುಗಳ ಆಯೋಗದ ಚಟುವಟಿಕೆಗಳು ಕುರಿತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾನವ ಹಕ್ಕುಗಳು ಉಲ್ಲಂಘನೆಯಾಗದಿದ್ದರೆ ಉತ್ತಮ ಬದುಕು ನಡೆಸಲು ಸಾಧ್ಯವಿದೆ. ನಾಗರಿಕರ ಮೇಲೂ ಹೆಚ್ಚಿನ ಹೊಣೆಗಾರಿಕೆ ಇದೆ. ಅದನ್ನು ಅರಿತು ನಡೆಯಬೇಕಿದೆ. ಹಕ್ಕುಗಳು ಉಲ್ಲಂಘನೆಯಾದರೆ ಅದಕ್ಕೆ ತಕ್ಕಂತೆ ಪರಿಹಾರ ಪಡೆಯಲು ಕಾನೂನಿನಲ್ಲಿ ಅವಕಾಶ ಇದೆ ಎಂದರು.

ಮಾನವ ಹಕ್ಕುಗಳ ವಿಸ್ತಾರ ತುಂಬಾ ದೊಡ್ಡದಾಗಿದೆ. ಶಾರೀರಿಕ ಹಕ್ಕು, ಸಾಮಾಜಿಕ ಹಕ್ಕು, ವೈಯಕ್ತಿಕ ಹಕ್ಕು ಎಂದು ವಿಂಗಡಿಸಲಾಗಿದೆ. ಸಂವಿಧಾನ ಮೂಲಭೂತ ಹಕ್ಕುಗಳನ್ನು ಕೇವಲ ಮನುಷ್ಯರಿಗಷ್ಟೆ ನೀಡಿಲ್ಲ. ಪಶು ಪಕ್ಷಿ, ಪ್ರಾಣಿ ಮತ್ತು ಗಿಡ ಮರಗಳಿಗೂ ನೀಡಿದೆ. ಪ್ರತಿಯೊಬ್ಬರು ಸ್ವತಂತ್ರವಾಗಿ ಜೀವಿಸುವ ಹಕ್ಕು ಹೊಂದಿದ್ದಾರೆ. ಗಾಳಿ, ಬೆಳಕು, ನೀರು ಆಹಾರ ಸೇವನೆ ಉಪಯೋಗಿಸುವುದು ಎಲ್ಲರ ಜನ್ಮಸಿದ್ಧ ಹಕ್ಕು ಇದಕ್ಕೆ ಯಾವ ಕಾನೂನು ಬೇಕಿಲ್ಲ ಎಂದು ಹೇಳಿದರು.

ಪುರಾತನಕಟ್ಟಡಗಳನ್ನುಧ್ವಂಸಗೊಳಿಸುವ ಹಕ್ಕು ಯಾರಿಗೂ ಇಲ್ಲ. ಹಾಗಾಗಿ ಕಟ್ಟಡಗಳೂ ತನ್ನದೆ ಆದ ಹಕ್ಕು ಹೊಂದಿವೆ ಎನ್ನುವುದನ್ನು ಮೊದಲು ಎಲ್ಲರೂ ತಿಳಿದುಕೊಳ್ಳಬೇಕು. ದೇಶ ದೇಶಗಳ ಮಧ್ಯೆ ನಡೆಯುವ ಘರ್ಷಣೆಗಳನ್ನು ತಡೆಯುವುದಕ್ಕಾಗಿ ಸಂಯುಕ್ತ ರಾಷ್ಟ್ರಗಳ ಒಕ್ಕೂಟ 1948 ರಲ್ಲಿ ಮಾನವ ಹಕ್ಕುಗಳನ್ನು ಜಾರಿಗೆ ತಂದಿತು. ಪುರಾತನ ಕಾಲದಿಂದಲೂ ಮಾನವ ಹಕ್ಕುಗಳ ಪರಿಕಲ್ಪನೆ ಇದೆ. ಎರಡನೆ ಮಹಾಯುದ್ಧದ ನಂತರ ಮಾನವ ಹಕ್ಕುಗಳ ಮಹತ್ವ ಏನು ಎನ್ನುವುದು ತಿಳಿದ ಮೇಲೆ ಎಲ್ಲಾ ದೇಶಗಳಿಗೆ ಮಾನವ ಹಕ್ಕುಗಳು ಅವಶ್ಯಕವಾಯಿತು ಎಂದರು.

ಎಸ್.ಜೆ.ಎಂ.ಮಹಿಳಾ ಕಾಲೇಜು ಪ್ರಾಚಾರ್ಯ ಪ್ರೊ.ಎಂ.ಎಸ್. ಕರಿಸಿದ್ದೇಶ್ವರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಕಲಾ ಕಾಲೇಜು ಅಪರಾಧಶಾಸ್ತ್ರ ಹಾಗೂ ನ್ಯಾಯ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ನಟರಾಜ್, ಮಾನವ ಹಕ್ಕುಗಳ ಕಲ್ಯಾಣ ಮಂಡಳಿ ಅಧ್ಯಕ್ಷ ಹಾಗೂ ದಾವಣಗೆರೆ ವಿ.ವಿ. ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಜಿ.ಎಸ್. ವೆಂಕಟರೆಡ್ಡಿ ಭಾಗವಹಿಸಿದ್ದರು. ರೇಖಾ ಪ್ರಾರ್ಥಿಸಿದರು. ಪ್ರಿಯಾಂಕ ಸ್ವಾಗತಿಸಿದರು. ಜೇಜಿ ವಂದಿಸಿದರು. ಮೇಘನಾ ನಿರೂಪಿಸಿದರು.

Scanned with CamSca